## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 437(497) |
| ಸದಸ್ಯರ ಹೆಸರು | : ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 19.02.2024 |
| ಉತ್ತರಿಸುವ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದ ಖಾಸಗಿ ಅನುದಾನಿತ ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ 2015ರ ನಂತರ ನಿವೃತ್ತಿ ನಿಧನ ಇತ್ಯಾದಿಗಳಿಂದ ತೆರವಾಗಿರುವ ಶಿಕ್ಷಕರ/ಉಪನ್ಯಾಸಕರ ಹುದ್ದೆಗಳೆಷ್ಟು; (ಪ್ರತ್ಯೇಕವಾದ ಮಾಹಿತಿ ನೀಡುವುದು) | ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ:01.01.2016 ರಿಂದ 31.08.2023ರ ವರೆಗೆ ನಿವೃತ್ತಿ, ನಿಧನ ರಾಜಿನಾಮೆ ಇತರೆ ಕಾರಣಗಳಿಂದ ತೆರೆವಾದ ಖಾಲಿ ಬೋಧಕ ಹುದ್ದೆಗಳ ವಿವರ ಈ ಕೆಳಕಂಡಂತಿದೆ. ಮಾಹಿತಿಯನ್ನು ಅನುಬಂಧ 1 ಮತ್ತು 2 ರಲ್ಲಿ ಒದಗಿಸಲಾಗಿದೆ.<br><br>ಅನುದಾನಿತ ಪ್ರೌಢಶಾಲೆ: ಬೋಧಕ ಹುದ್ದೆಗಳ ಸಂಖ್ಯೆ:7739<br>ಅನುದಾನಿತ ಪದವಿ ಪೂರ್ವ ಕಾಲೇಜು: ಬೋಧಕ ಹುದ್ದೆಗಳ ಸಂಖ್ಯೆ:1948 |
| ಆ | ಪ್ರೌಢಶಾಲಾ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ತೆರವಾಗಿರುವ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಅನುಮತಿ ನೀಡಲು ಚಿಂತನೆ ನಡೆಸಿದೆಯೇ; ಹಾಗಿದ್ದಲ್ಲಿ ಯಾವ ವರ್ಷದವರೆಗೆ ಮತ್ತು ಈ ಕುರಿತು ಯಾವಾಗ ಹೊರಡಿಸಲಾಗುವುದು? (ವಿವರ ನಿಡುವುದು) | ಅನುದಾನಿತ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ ಹಾಗೂ ಇನ್ನಿತರೆ ಕಾರಣಗಳಿಂದ ದಿನಾಂಕ:31.12.2015ರವರೆಗೆ ತೆರವಾಗಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br><br>ಅನುದಾನಿತ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ ಹಾಗೂ ಇನ್ನಿತರೆ ಕಾರಣಗಳಿಂದ ದಿನಾಂಕ:01.01.2016 ರಿಂದ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆಯ ಸಹಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ. |

ಇಪಿ 57 ಎಸ್ಇಎಸ್ 2024

(ಎಸ್ ಮಧುಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ
ಇಲಾಖಾ ಸಚಿವರು

## ಅನುಬಂಧ

**ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ದಿನಾಂಕ:01.01.2016 ರಿಂದ 31.08.2023ರವರೆಗೆ ನಿಧನ, ನಿವೃತ್ತಿ, ರಾಜೀನಾಮೆ ಇತರೆ ಕಾರಣಗಳಿಂದ ತೆರವಾದ ಬೋಧಕ ಹುದ್ದೆಗಳ ವಿವರ ಈ ಕೆಳಕಂಡಂತಿದೆ.**

| ವರ್ಷವಾರು | | | | | | | | | |
|---|---|---|---|---|---|---|---|---|---|
| ಆಯುಕ್ತಾಲಯ | 2016 | 2017 | 2018 | 2019 | 2020 | 2021 | 2022 | 2023 | ಒಟ್ಟು |
| ಬೆಂಗಳೂರು | 532 | 466 | 526 | 588 | 574 | 741 | 677 | 556 | 4660 |
| ಕಲಬುರಗಿ | 98 | 67 | 74 | 86 | 91 | 102 | 88 | 93 | 699 |
| ಧಾರವಾಡ | 388 | 239 | 256 | 281 | 298 | 334 | 328 | 356 | 2380 |
| ಒಟ್ಟು | 1018 | 772 | 856 | 955 | 963 | 1177 | 1093 | 905 | 7739 |

**ರಾಜ್ಯದ ಖಾಸಗಿ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ದಿನಾಂಕ:01.01.2016 ರಿಂದ 31.08.2023ರವರೆಗೆ ನಿಧನ, ನಿವೃತ್ತಿ, ರಾಜೀನಾಮೆ ಇತರೆ ಕಾರಣಗಳಿಂದ ತೆರವಾದ ಬೋಧಕ ಹುದ್ದೆಗಳ ವಿವರ ಈ ಕೆಳಕಂಡಂತಿದೆ.**

| ವರ್ಷ | ಖಾಲಿ ಹುದ್ದೆಗಳ ವಿವರ |
|---|---|
| 2016 | 173 |
| 2017 | 157 |
| 2018 | 219 |
| 2019 | 236 |
| 2020 | 267 |
| 2021 | 297 |
| 2022 | 320 |
| 2023 | 279 |
| ಒಟ್ಟು | 1948 |